ಶ್ರೀ ಎಂ. ಎಸ್. ಕೃಷ್ಣನ್.—ಇದಕ್ಕೆ ನೋಟೀಸ್ ಬೇಕಾಗಿಲ್ಲ. I don't think it requires notice.

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರೋ ಇಲ್ಲವೋ ಅದನ್ನು ನೋಡುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ನಿಂತುಕೊಂಡಿದ್ದೇನೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ತಾವು ಕೊಡುತ್ತಿಲ್ಲ.

ಅಧ್ಯಕ್ಷರು.—ನಿಮ್ಮ ನೋಟೀಸ್ ಇದೆಯೋ ಇಲ್ಲವೋ ಅದನ್ನು ನೋಡುತ್ತೇನೆ ತಾವು ಕುಳಿತುಕೊಳ್ಳಿ.

ಮಾನ್ಯ ಸದಸ್ಯರಾದ ಕುಶಾಲರವರು ತಮ್ಮ ಮನವಿಯನ್ನು ಸಭೆಯ ಮುಂದೆ ಮಂಡಿಸಿ. ಮಾನ್ಯ ಸದಸ್ಯರು ಸಭೆಯಲ್ಲಿಲ್ಲ.

ಗಮನ ಸೆಳೆಯುವ ಸೂಚನೆ

(V) ವಿರಾಜಪೇಟೆ ತಾಲ್ಲೂಕು ಕೋತೂರು ಗ್ರಾಮದಲ್ಲಿ ನಡೆದ ಕೊಲೆಯ ಬಗ್ಗೆ

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೆ, ವಿರಾಜಪೇಟೆ ತಾಲ್ಲೂಕಿನ ಕೋತೂರು ಗ್ರಾಮದಲ್ಲಿ ದಿನಾಂಕ ೧೮ನೇ ಡಿಸೆಂಬರ್ ೧೯೮೫ರಂದು ನಡೆದ ಕೊಲೆಯ ವಿಚಾರದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಣಿಯವರು ಗಮನ ಸೆಳೆದಿರುವ ವಿಚಾರದ ಬಗ್ಗೆ ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

ದಿನಾಂಕ ೧೬-೧೨-೮೫ರಂದು ಸಂಜೆ ಸುಮಾರು ೭-೩೦ ಗಂಟೆ ಸಮಯದಲ್ಲಿ ಕೊತೂರು ಗ್ರಾಮದ ರಾಮಕೃಷ್ಣ ಹೊಳ್ಳ ಎಂಬುವರು ವಿರಾಜಪೇಟೆಯ ಆರಕ್ಷಕ ಉಪಾಧೀಕ್ಷಕರವರನ್ನು ಅವರ ಕಛೇರಿಯಲ್ಲಿ ಭೇಟಿ ಮಾಡಿ ಒಂದು ಅರ್ಜಿಯನ್ನು ಸಲ್ಲಿಸಿ ಈ ಕೆಳಕಂಡಂತೆ ಹೇಳಿರುತ್ತಾರೆ.

ಅವರ ಎದುರಾಳಿಗಳಾದ ಮಣ್ಣಕಮನೆ ಎಂ. ಬಿ. ಗಣೇಶ್ ಮತ್ತು ಅವರ ಕುಟುಂಬದ ಸದಸ್ಯರು ಅವರಿಗೆ ತೊಂದರೆಗಳನ್ನು ಉಂಟುಮಾಡಿ ಅವರ ಜಮಿನಾನುಗಳನ್ನು ಶಾಂತಿಯಿಂದ ಅನುಭವಿಸುವುದಕ್ಕೆ ಬಿಡುತ್ತಾ ಇಲ್ಲವೆಂದು ತಿಳಿಸಿದರು. ಆತನು ಮಡಿಕೇರಿಯ ಸಿವಿಲ್ ನ್ಯಾಯಾಲಯದಿಂದ ಖಾಯಂ ನಿಷೇದಾಜ್ಞೆಯನ್ನು ಪಡೆದಿರುವುದಾಗಿಯೂ, ಆದರೆ ಶ್ರೀ ಎಂ. ಬಿ. ಗಣೇಶ್‌ರವರ ಪತ್ನಿಯು ವೀರಾಜಪೇಟೆಯ ನ್ಯಾಯಾಲಯದಿಂದ ತಾತ್ಕಾಲಿಕ ನಿಷೇದಾಜ್ಞೆಯನ್ನು ಪಡೆದಿದ್ದು ಮಣ್ಣಕಮನೆ ಕುಟುಂಬದವರು ಜಮಿನಾನುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದು ಹೇಳಿ ತನಗೆ ರಕ್ಷಣೆ ಕೊಡಬೇಕೆಂದು ಕೋರಿಕೊಂಡರು. ಅದರಂತೆ ವೀರಾಜಪೇಟೆಯ ಆರಕ್ಷಕ ಉಪಾಧೀಕ್ಷಕರು ಕುಟ್ಟ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರವರಿಗೆ ಅದೇ ದಿನ ಸುಮಾರು ೯-೩೦ ಗಂಟೆ ಸಮಯದಲ್ಲಿ ತುರ್ತು ಸಂದೇಶವನ್ನು ಕಳುಹಿಸಿ ಅವರಿಗೆ ರಕ್ಷಣೆ ಕೊಟ್ಟು ವರದಿ ಮಾಡುವಂತೆ ಹೇಳಿದರು, ದಿನಾಂಕ ೧೭-೧೨-೮೫ರಂದು ಮಣ್ಣಕಮನೆ ಕುಟುಂಬದವರು ಸದರೀ ಗ್ರಾಮದ ಸರ್ವೆ ನಂ. ೧೫೧ರಲ್ಲಿ ಸುಮಾರು ಒಂದು ಎಕರೆ ಜಮಿನಿಗೆ ಬೇಲಿ ಹಾಕಿಸಲು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ರಾಮಕೃಷ್ಣ ಹೊಳ್ಳರವರು ಬೇಲಿ ಹಾಕುವುದನ್ನು ವಿರೋಧಿಸಿ ಕುಟ್ಟ ಪೋಲಿಸ್ ಠಾಣೆಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಂಡರು.

ಕುಟ್ಟ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ತನ್ನ ಸಿಬ್ಬಂದಿಯೊಂದಿಗೆ ಸುಮಾರು ೧೧ ಗಂಟೆ ಸಮಯದಲ್ಲಿ ಸ್ಥಳಕ್ಕೆ ಭೇಟಿ ಕೊಟ್ಟು ಎರಡು ಪಕ್ಷದವರಿಗೂ ಸಮಾಧಾನ ಹೇಳಿ ಶಾಂತಿಯಿಂದ ಇರುವಂತೆ ಸೂಚಿಸಿ ವಾಪಸ್ ಹೋದರು. ಆದರೆ ಸುಮಾರು ೩-೩೦ ಗಂಟೆ ಸಮಯದಲ್ಲಿ ಮಣ್ಣಕಮನೆ ಕುಟುಂಬದ ಸದಸ್ಯರಾದ ಎಂ. ಬಿ. ಗಣೇಶ್ ಮತ್ತು ಇತರ ೫ ಜನರು ಬೇಲಿ ಹಾಕುವುದಕ್ಕೆ ಪ್ರಾರಂಭಿಸಿದರು. ಅದನ್ನು ನೋಡಿದ ರಾಮಕೃಷ್ಣ ಹೊಳ್ಳರವರು ತನ್ನ ಗನ್ನನ್ನು ತೆಗೆದುಕೊಂಡು ಪಿಪ್ಸ್‌ತಾಳಿಗಳ ಮೇಲೆ ಗುಂಡು ಹಾರಿಸುವುದಕ್ಕೆ ಪ್ರಾರಂಭಿಸಿದರು.- ಸುಮಾರು ೫ ಗಂಟೆ ಸಮಯದಲ್ಲಿ

ಸುದ್ದಿ ತಿಳಿದಾಗ ಆರಕ್ಷಕ ಉಪ ನಿರೀಕ್ಷಕರು ತನ್ನ ಸಿಬ್ಬಂದಿಯೊಂದಿಗೆ ಖಾಸಗಿ ಜೀಪ್ ನಂ. ಕೆಎಲ್‌ಎನ್ ೯೦೪೪ರಲ್ಲಿ ತುರ್ತು ಪರಿಸ್ಥಿತಿಯನ್ನು ಹೆದರಿಸಲು ಸ್ಥಳಕ್ಕೆ ಹೋದರು. ರಾಮಕೃಷ್ಣ ಹೊಳ್ಳರವರು ಪೋಲೀಸ್‌ನವರ ಮೇಲೆ ಗುಂಡು ಹಾರಿಸಿದರು. ಆ ಗುಂಡಿನ ಗಾಯಗಳಾದವು.

ರಾಮಕೃಷ್ಣ ಹೊಳ್ಳರವರು ಹತಾಶರಾಗಿ ಎಲ್‌ಜಿಪಿ ಗ್ಯಾಸ್ ಸಿಲಿಂಡರನ್ನು ಬಿಚ್ಚಿ ಬೆಂಕಿ ಹಚ್ಚಿದರು ಆನಂತರ ಪರಿಣಾಮವಾಗಿ ದೊಡ್ಡ ಆಸ್ಫೋಟನೆಯಾಗಿ ಇಡೀ ಮನೆಯು ಬೆಂಕಿಯಿಂದ ಆವರಿಸಿದ್ದಲ್ಲದೆ ರಾಮಕೃಷ್ಣ ಹೊಳ್ಳ ಮತ್ತು ಆತನ ಮನೆಯವರು ಸುಟ್ಟು ಹೋದರು, ವೀರಾಜಪೇಟೆಯ ಆರಕ್ಷಕ ಉಪಾಧೀಕ್ಷಕರು ಕುಟ್ಟ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರವರನ್ನು ಮತ್ತು ಗಾಯಗೊಂಡ ಇತರ ಪೋಲೀಸ್ ಸಿಬ್ಬಂದಿಯನ್ನು ವೀರಾಜಪೇಟೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿ, ಅವರು ವೀರಾಜಪೇಟೆಯ ಆರಕ್ಷಕ ಉಪ ನಿರೀಕ್ಷಕರು ಮತ್ತು ಇತರ ಸಿಬ್ಬಂದಿಯವರೊಡನೆ ಕೋತೂರು ಗ್ರಾಮಕ್ಕೆ ೭-೩೦ಗಂಟೆ ಸಮಯದಲ್ಲಿ ಹೋದರು. ರಾಮಕೃಷ್ಣ ಹೊಳ್ಳರವರ ಮನೆ ಬೆಂಕಿಯಿಂದ ಉರಿಯುತ್ತಿದ್ದಾಗ ಅದರ ಅಕ್ಕ ಪಕ್ಕದಲ್ಲಿ ಯಾರೂ ಇರಲಿಲ್ಲ. ಆರಕ್ಷಕ ಉಪ ನಿರೀಕ್ಷಕರು ಪೋಲೀಸರ ಹಾಗೂ ಸಾರ್ವಜನಿಕರ ಸಹಾಯದೊಂದಿಗೆ ಬೆಂಕಿಯನ್ನು ನಂದಿಸಿ ಬಾಗಿಲಿನ ಚಿಲಕವನ್ನು ತೆಗೆದು ಮನೆಯೊಳಗೆ ನೋಡಲಾಗಿ ರಾಮಕೃಷ್ಣ ಹೊಳ್ಳ ಆತನ ಪತ್ನಿ ಶ್ರೀಮತಿ ಕಾವೇರಿ ಮತ್ತು ಮಗು ಫಣಿರಾಜ್ ಇವರುಗಳು ಸುಟ್ಟು ಹೋಗಿರುವುದನ್ನು ಕಂಡರು. ಆಗ ರಾತ್ರಿಯಾಗಿದ್ದುದರಿಂದ ಕಾವಲು ವ್ಯವಸ್ಥೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ವಿಷಯವನ್ನು ತಿಳಿಸಿದರು. ಇದರ ಬಗ್ಗೆ ವೀರಾಜಪೇಟೆಯ ವೃತ್ತ ಆರಕ್ಷಕ ನಿರೀಕ್ಷಕರವರು ಅಪರಾಧ ಸಂಖ್ಯೆ ೬೧;೮೫ ಕಲಂ ೪೨೭, ೪೫೬, ೫೦೭, ೫೫೫, ಮತ್ತು ೫೦೨ ಭಾ.ದಂ.ಸಂ. ಪ್ರಕಾರ ಗುನ್ನೆಯೊಂದನ್ನು ನೋಂದಾಯಿಸಲಾಯಿತು. ಮೈಸೂರಿನಲ್ಲಿ ಬಂದೋಬಸ್ತ್ ಕರ್ತವ್ಯದಲ್ಲಿ ನಿರತರಾಗಿದ್ದ ಕೊಡಗು ಜಿಲ್ಲಾ ಆರಕ್ಷಕರವರು ಮೈಸೂರಿನಿಂದ ಕುಶಾಲನಗರದ ಹತ್ತಿರ ಬುದಾಗ ಕೋತೂರಿನಲ್ಲಿ ನಡೆದ ಘಟನೆ ಬಗ್ಗೆ ತುರ್ತಿ ಸುದ್ದಿಯನ್ನು ಕೇಳಿದರು. ಅಲ್ಲಿಂದ ಅವರು ನೇರವಾಗಿ ಸ್ಥಳಕ್ಕೆ ಹೋಗಿ ಮಡಿಕೇರಿಯಿಂದ ಸಶಸ್ತ್ರ ಪಡೆಯನ್ನು ಸ್ಥಳಕ್ಕೆ ಕಳುಹಿಸುವಂತೆ ಸೂಚಿಸಿದರು. ಅಲ್ಲಿ ವೀರಾಜಪೇಟೆಯ ಆರಕ್ಷಕ ಉಪಾಧೀಕ್ಷಕರವರಿಗೆ ಸೂಕ್ತ ಸೂಚನೆಗಳನ್ನು ಕೊಟ್ಟಿದ್ದಲ್ಲದೆ ಮೇಲ್ಕಂಡ ಪ್ರಕರಣದ ತನಿಖೆಯನ್ನು ಸಹ ಬೆಂಗಳೂರಿನ ಮುಖ್ಯ ಕಛೇರಿಯ ಅದೇಶದಂತೆ ವಹಿಸಿದರು.

ದಿನಾಂಕ ೧೯-೧೨-೮೫ರಂದು ತನಿಖಾಧಿಕಾರಿಯವರು ಮೃತ ದೇಹಗಳ ಪಂಚನಾಮೆಯನ್ನು ಸ್ಥಳದಲ್ಲೇ ಮರಣೋತ್ತರ ಪರೀಕ್ಷೆಯೊಂದಿಗೆ ನಡೆಸಿ ಇಬ್ಬರು ಸಾಕ್ಷಿಗಳನ್ನು ಪರಿಶೀಲಿಸಿದರು. ಆ ಸಮಯದಲ್ಲಿ ಜಿಲ್ಲಾ ಆರಕ್ಷಕ ಅಧೀಕ್ಷಕರವರು ಮಣ್ಣಕ್ಕವನೆ ಕಾಟುಂಬ ಸದಸ್ಯರಾದ ಎಂ. ಬಿ. ಗಣೇಶ್, ಶ್ರೀಮತಿ ಇಂದಿರಾ, ಕಲಮಯ್ಯ ಇವರ ಮೇಲೆ ದೂರನ್ನು ಇತ್ತರು. ಆದು ಕುಟ್ಟ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೬೨;೮೫ ಕಲಂ ೧೪೩, ೧೪೭, ೪೪೭, ೫೦೬ ಮತ್ತು ೪೨೨, ಭಾ.ದ.ಸಂ. ಪ್ರಕಾರ ಎದುರು ಪೊಕೆದ್ದ ಮೆಯೊಂದನ್ನು ನೊಂದಾಯಿಸಿ ವೀರಾಜಪೇಟೆಯ ವೃತ್ತ ಆರಕ್ಷಕ ನಿರೀಕ್ಷಕರವರು ತನಿಖೆಯನ್ನು ಕೈಗೊಂಡು ದಿನಾಂಕ ೧೯-೧೨-೮೫ರಂದು ವೃತ್ತ ಆರಕ್ಷಕ ನಿರೀಕ್ಷಕರವರು ಮೇಲ್ಕಂಡ ಮೊಕದ್ದಮೆಯಲ್ಲಿ ಮುಖ್ಯ ಅಪರಾಧಿಯಾದ ಎ. ಆರ್. ಕೃಷ್ಣಕುಮಾರ್ ಉರುಫ್ ಚಿಪ್ಪಿ ಎಂಬುವನನ್ನು ದಸ್ತಗಿರಿ ಮಾಡಿ ವೀರಾಜಪೇಟೆ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರ್ ಪಡಿಸಿದರು. ಉಳಿದ ಅಪರಾಧಿಗಳಾದ ಅಪ್ಪಣ್ಣಮ್ಮಯ್ಯ ಮತ್ತು ಎಂ. ಎಸ್. ಗಣೇಶ್ ಇವರಿಬ್ಬರು ನಿರೀಕ್ಷಣಾ ಜಾಮೀನು ಪಡೆದರು. ಎ ಆರ್. ಕೃಷ್ಣಕುಮಾರ್ ಉರುಫ್ ಚಿಪ್ಪಿಯವರನ್ನು ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಯಿತು. ಅಪರಾಧ ಸಂಖ್ಯೆ ೬೧;೮೫ರಲ್ಲಿ ೧೪ ಜನ ಸಾಕ್ಷಿದಾರರನ್ನು ವೀರಾಜಪೇಟೆಯ ಆರಕ್ಷಕ ಉಪ ಅಧೀಕ್ಷಕರು ಪರಿಶೀಲಿಸಿದರು.

ಅದೇ ದಿನ ವೀರಾಜಪೇಟೆಯ ಆರಕ್ಷಕ ಉಪಾಧೀಕ್ಷಕರು ಘಟನೆಯಾದ ಸ್ಥಳದಿಂದ ಗೋಣಿಕೊಪ್ಪಲಿಗೆ ವಾಪಸ್ ಹೋಗುತ್ತಿದ್ದಾಗ ವಿಧಾನ ಸಭೆ ಸದಸ್ಯೆ ಶ್ರೀಮತಿ ಸುಮಾ ವಸಂತ್‌ರವರು ಮಾಯಮುಡಿಯ ಕೆ. ಬಿ. ವಿಶ್ವನಾಥ್ ಮತ್ತು ವೀರಾಜಪೇಟೆಯ ಪತ್ರಿಕಾ ವರದಿಗಾರರಾದ ಮನುಶೆಣೈರವರು ಕೋತೂರು ಗ್ರಾಮಕ್ಕೆ ಹೋಗುವುದನ್ನು ನೋಡಿದರು. ಆರಕ್ಷಕ ಉಪಾಧೀಕ್ಷಕರು ಜೀಪಿನಿಂದ ಇಳಿದು ಮತ್ತೆ ಅವರೊಡನೆ ಘಟನೆ ನಡೆದ ಸ್ಥಳಕ್ಕೆ ಹೋದರು. ಆ ಸ್ಥಳದಲ್ಲಿ ಅವರು ಸುಮಾರು ಅರ್ಧ ಗಂಟೆ ಇದ್ದು ಅದೇ ಕಾರಿನಲ್ಲಿ ಗೋಣಿಕೊಪ್ಪಲ್ ಪೋಲೀಸ್ ಠಾಣೆಗೆ ವಾಪಸ್ ಬಂದರು. ದಿನಾಂಕ ೩೧-೧೨-೮೫ರಂದು ಕೋತೂರು ಗ್ರಾಮದಲ್ಲಿ ದಿನಾಂಕ ೧೭-೧೨-೮೫ರಂದು ಪೋಲೀಸರು ಗುಂಡು

ಹಾರಿಸಿದ ಬಗ್ಗೆ ಖಚಿತ ಸುದ್ದಿ ತಿಳಿಯಿತು. ಆ ಕೂಡಲೇ ಜಿಲ್ಲಾ ದಂಡಾಧಿಕಾರಿಯವರನ್ನು ನ್ಯಾಯಾಂಗ ತನಿಖೆಯನ್ನು ನಡೆಸುವಂತೆ ಕೋರಲಾಯಿತು. ಅದರಂತೆ ಜಿಲ್ಲಾ ದಂಡಾಧಿಕಾರಿಯವರು ಮಡಿಕೇರಿಯ ಉಪ ವಿಭಾಗದ ದಂಡಾಧಿಕಾರಿಯವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಿದರು. ತನಿಖೆಯು ಮುಂದುವರಿಯುತ್ತಿದೆ.

ಏತನ್ಮಧ್ಯೆ ಕೋತೂರು ಗ್ರಾಮದಲ್ಲಿ ಪೋಲೀಸರು ಗುಂಡು ಹಾರಿಸಿದರು ಎಂಬುದನ್ನು ತನಿಖಾಧಿಕಾರಿಗಳ ಅಥವಾ ಇತರ ಮೇಲಿನ ಅಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲ. ಚಿಕಿತ್ಸೆಯನ್ನು ಪಡೆದ ಮೇಲೆ ಕುಟ್ಟ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಕೆಲಸಕ್ಕೆ ಹಾಜರಾದ ಮೇಲೂ ಕೂಡ ದಿನಾಂಕ ೧೭-೧೨-೮೫ರಂದು ಗುಂಡು ಹಾರಿಸಿದ ಬಗ್ಗೆ ತಿಳಿಸಲಿಲ್ಲ.

ಈ ಸಂಬಂಧದಲ್ಲಿ ಜಿಲ್ಲಾ ಆರಕ್ಷಕ ಅಧೀಕ್ಷಕರು ವೀರಾಜಪೇಟೆಯ ಆರಕ್ಷಕ ಉಪ ಅಧೀಕ್ಷಕರವರ ಮತ್ತು ವೃತ್ತ ಆರಕ್ಷಕ ನಿರೀಕ್ಷಕರವರ ಹಾಗೂ ಕುಟ್ಟಾ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷರವರ ಹೇಳಿಕೆಯನ್ನು ಪಡೆಯಲಾಗಿ, ಆರಕ್ಷಕ ಉಪ ಅಧೀಕ್ಷಕರು, ಪೋಲೀಸರು ಗುಂಡು ಹಾರಿಸಿರುವ ಬಗ್ಗೆ ದಿನಾಂಕ ೩೧-೧೨-೮೫ರವರೆಗೂ ತನಗೆ ಗೊತ್ತಿರಲಿಲ್ಲವೆಂದು ಹೇಳಿರುವರು. ವೃತ್ತ ಆರಕ್ಷಕ ನಿರೀಕ್ಷಕರವರು ಮೊಕದ್ದಮೆ ೬೨೮ರ ತನಿಖೆಯ ಒತ್ತಡದಲ್ಲಿದ್ದೆನೆಂದು ಹೇಳಿದರು. ಕುಟ್ಟಾ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರವರು ದಿನಾಂಕ ೧೭-೧೨-೮೫ರಂದು ಮಧ್ಯಾಹ್ನ ಖಾಸಗೀ ಜೀಪಿನಲ್ಲಿ ಕೋತೂರು ಗ್ರಾಮಕ್ಕೆ ಹೋಗುವುದಾಗಿ. ಒಂದು ೪೧೦ ಮಸ್ಕೆಟ್, ೧೦ ಸುತ್ತು ಗುಂಡುಗಳನ್ನು ತೆಗೆದುಕೊಳ್ಳಲು ತನ್ನ ಸಿಬ್ಬಂಧಿಗೆ ಆದೇಶಿಸಿದರು. ಸ್ಥಳಕ್ಕೆ ಹೋದ ಮೇಲೆ ಅವರು ಜೀಪಿನಿಂದ ತನ್ನ ಸಿಬ್ಬಂಧಿಯೊಂದಿಗೆ ಇಳಿದರು. ಏತನ್ಮಧ್ಯೆ ರಾಮಕೃಷ್ಣ ಹೊಳ್ಳರವರು ಪೋಲೀಸರ ಕಡೆ ಗುಂಡು ಹಾರಿಸುತ್ತಿದ್ದುದರ ಪರಿಣಾಮವಾಗಿ ಪಿ.ಸಿ. ೨೧೧ ಕೆ.ಕೆ. ಸುಬ್ಬಯ್ಯನಿಗೆದೆಗೆ ತೀವ್ರವಾದ ಗಾಯಗಳಾದವು. ಆರಕ್ಷಕ ಉಪ ನಿರೀಕ್ಷಕರು ಶ್ರೀ ರಾಮಕೃಷ್ಣ ಹೊಳ್ಳರವರಿಗೆ ತಾವು ಪೋಲೀಸರೆಂದೂ ತಿಳಿಸಿ ಗುಂಡು ಹಾರಿಸ ಬಾರದೆಂದು ಕೂಗಿದರು. ಆದರೂ ರಾಮಕೃಷ್ಣ ಹೊಳ್ಳರವರು ಸತತವಾಗಿ ಗುಂಡು ಹಾರಿಸುತ್ತಿದ್ದುದ ರಿಂದ ಎಲ್ಲರೂ ಗಾಯಗೊಂಡರೆಂದು ಹೇಳಿದರು. ನಾಗರೀಕ ಸಮಿತಿಯ ಸದಸ್ಯರೂ ಹಾಗೂ ವಕೀಲರೂ ಆದ ಅಪ್ಪಣ್ಣಮ್ಮಯ್ಯನವರು ಗುಂಡಿನ ಏಟಿನಿಂದ ಗಾಯಗೊಂಡರು. ಆಗ ಆರಕ್ಷಕ ಉಪ ನಿರೀಕ್ಷಕರು ಹೆಚ್.ಸಿ. ೨೦ ಬಿ. ಆರ್. ಗಂಗಾಧರ್‌ರವರಿಗೆ ಗಾಳಿಯಲ್ಲಿ ಗುಂಡು ಹಾರಿಸಲು ಹೋದರು. ಅದರಂತೆ ೪ ಸುತ್ತು ಗುಂಡು ಹಾರಿಸಿದರು. ಆದರೂ ರಾಮಕೃಷ್ಣ ಹೊಳ್ಳರವರು ಹಾರಿಸಿದ ಗುಂಡಿನ ಏಟಿನಿಂದ ಮೇಲ್ಕಂಡ ಹೆಚ್. ಸಿ. ಗಂಗಾಧರ್‌ರವರು ಕೆಳಗೆ ಬಿದ್ದರು. ಗಾಯಗೊಂಡರವರನ್ನು ತೆಗೆದುಕೊಂಡು ಹೋಗುವುದಕ್ಕೆ ಜೀಪಿನ ಚಾಲಕನಿಗೆ ಆರಕ್ಷಕ ಉಪನಿರೀಕ್ಷಕರು ವ್ಯವಸ್ಥೆ ಮಾಡಿದರು. ರಾಮಕೃಷ್ಣ ಹೊಳ್ಳರವರು ಸತತವಾಗಿ ಗುಂಡು ಹಾರಿಸುತ್ತಿದ್ದುದರಿಂದ ಆರಕ್ಷಕ ಉಪ ನಿರೀಕ್ಷಕರು ಪಿ. ಸಿ. ೧೦೬ ಬೆಳ್ಳಿಯಪ್ಪನಿಗೆ ಗಾಳಿಗೆ ಗುಂಡು ಹಾರಿಸುವುದಕ್ಕೆ ಮತ್ತೊಮ್ಮೆ ಸೂಚಿಸಿದರು. ಆರಕ್ಷಕ ಉಪ ನಿರೀಕ್ಷಕರವರು ಹಾಗೂ ಆತನ ಸಿಬ್ಬಂಧಿಯವರು ಗುಂಡೇಟಿನಿಂದ ಗಾಯಗೊಂಡರು, ಅವರು ಸದರಿ ಜೀಪಿನಿಂದ ವೀರಾಜಪೇಟೆಗೆ ಚಿಕಿತ್ಸೆಗಾಗಿ ಹೊರಟು ನಂತರ ಮೈಸೂರಿಗೆ ಕಾರಿನಲ್ಲಿ ಹೋದರು. ದಿನಾಂಕ ೧೯-೧೨-೮೫ರಂದು ಆರಕ್ಷಕ ಉಪ ನಿರೀಕ್ಷಕರವರು ಕರ್ತವ್ಯಕ್ಕೆ ಹಾಜರಾದರು. ದಿನಾಂಕ ೨೦-೧೨-೮೫ರಂದು ಹೆಚ್.ಸಿ. ಬಿ. ಆರ್. ಗಂಗಾಧರ್‌ರವರನ್ನು ಮೈಸೂರಿನ ಕೆ. ಆರ್. ಆಸ್ಪತ್ರೆಯಿಂದ ಬಿಡುಗಡೆಯಾಗಿ ಕೆಲಸಕ್ಕೆ ವಾಪಸ್ಸು ಬಂದನು. ಆತನು ಮಸ್ಕೆಟ್ ಮತ್ತು ನಾಲ್ಕು ಖಾಲಿ ಪೆಟ್ಟಿಗೆಗಳನ್ನು ಹಾಜರುಪಡಿಸಿದನು. ಆರಕ್ಷಕ ಉಪ ನಿರೀಕ್ಷಕರು ಮೊಲ್ಕಂಡ ಗೊಂದಲದಲ್ಲಿ ಉಳಿದ ಖಾಲಿ ಪೆಟ್ಟಿಗೆ ಮತ್ತು ಲೈವ್ ಕಾಟ್ರಿಜಸ್ ಯಾವುದಾದರೂ ಇದ್ದಲ್ಲಿ ಸ್ಥಳದಿಂದ ತೆಗೆದುಕೊಂಡು ಬರಲಿಲ್ಲವೆಂದು ಹೇಳಿದರು. ಪಿಸಿ. ೧೦೬ ಈತನು ಆರು ಸುತ್ತು ಗುಂಡುಗಳಲ್ಲಿ ಏಳು ಗುಂಡು ಹಾರಿಸಿದನು ಎಂಬುದಾಗಿ ಗೊತ್ತಿಲ್ಲವೆಂದು ಆರಕ್ಷಕ ಉಪ ನಿರೀಕ್ಷಕರ ಮುಂದೆ ಹೇಳಿರುವನು. ಆರಕ್ಷಕ ಉಪ ನಿರೀಕ್ಷಕರವರು ಆತನ ಮೇಲಧಿಕಾರಿಗಳಿಗೆ ಮೇಲ್ಕಂಡ ಘಟನೆಯ ಬಗ್ಗೆ ಮಾನಸಿಕ ಆಘಾತ ಮತ್ತು ಭಯದ ಕಾರಣ ತಿಳಿಸಲಿಲ್ಲ ವೆಂದು ಹೇಳಿರುತ್ತಾನೆ.

ಆರಕ್ಷಕ ಉಪ ಅಧೀಕ್ಷಕರು ತನಿಖೆ ನಡೆಸುವಲ್ಲಿ ವಿಫಲರಾಗಿದ್ದಾರೆ ಎಂಬ ಕಾರಣದಿಂದ ಅವರನ್ನು ಬೇರೆ ಕಡೆಗೆ ವರ್ಗ ಮಾಡಲಾಗಿದೆ.

ಕಟ್ಟಾ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಪೋಲೀಸರು ಗುಂಡು ಹಾರಿಸಿದುದರ ಬಗ್ಗೆ ಹಿರಿಯ ಅಧಿಕಾರಿಗಳಿಗೆ ತಿಳಿಸಲು ವಿಫಲರಾಗಿದ್ದಾರೆಂದು ಕೊಡಗು ಜಿಲ್ಲಾ ಆರಕ್ಷಕ ಅಧೀಕ್ಷಕರವರು ಅಭಿಪ್ರಾಯಪಟ್ಟಿದ್ದಾರೆ. ಈಗಾಗಲೇ ಮೇಲ್ಕಂಡ ಪ್ರಕರಣದ ಬಗ್ಗೆ ಸಿ.ಓ.ಡಿ. ತನಿಖೆಗಾಗಿ ವಿಶೇಷ ಆರಕ್ಷಕ ಮಹಾ ನಿರೀಕ್ಷಕರು, ಶರಬೇತಿ ಮತ್ತು ಅಪರಾಧ ತನಿಖಾ ಇಲಾಖೆ ಬೆಂಗಳೂರು ಇವರಿಗೆ ದಿನಾಂಕ ೨೦-೧-೮೬ರಂದು ಪತ್ರ ಬರೆಯಲಾಗಿದೆ. ತನಿಖೆಯು ವರದಿಗಾಗಿ ಕಾಯುಬಹುದು.

ಈ ಸಂದರ್ಭದಲ್ಲಿ ಸೂಚಿಸುವುದೇನೆಂದರೆ ಆಗಿನ ವೀರಾಜಪೇಟೆಯ ಆರಕ್ಷಕ ಉಪಾಧೀಕ್ಷಕರವರು ತನಿಖೆ ನಡೆಸುವುದರಲ್ಲಿ ವಿಫಲರಾಗಿದ್ದಾರೆ ಎಂಬುದರ ಬಗ್ಗೆ ಇಲಾಖಾ ಕ್ರಮವನ್ನು ತೆಗೆದುಕೊಳ್ಳುವುದರ ಬಗ್ಗೆ ಪರಿಶೀಲಿಸುತ್ತಿದೆ. ಮತ್ತು ಕಟ್ಟಾ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರ ಲೋಪದ ಬಗ್ಗೆ ವಿಚಾರಣೆ ನಡೆಸುವಂತೆ ದಕ್ಷಿಣ ವಲಯ ಆರಕ್ಷಕ ಉಪ ಮಹಾನಿರೀಕ್ಷಕರು, ಮೈಸೂರು ಇವರಿಗೆ ಸೂಚನೆ ಕೊಡಲಾಗಿದೆ.

ನಾನು ಕೋತೂರಿಗೆ ೭-೨ ರಂದು ಭೇಟಿ ನೀಡಿದ್ದೇನೆ. ಸ್ಥಳದ ಜನರೊಡನೆ ಸಹ ವಿಚಾರಣೆ ಮಾಡಿದ್ದೇನೆ. ಈ ಪ್ರಕರಣದ ಬಗ್ಗೆ ಸಿಓಡಿ ವಿಚಾರಣೆ, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ ವಿಚಾರಣೆ, ಹಾಗೂ ಇಲಾಖಾ ವಿಚಾರಣಾ ಕ್ರಮ ಸದ್ಯಕ್ಕೆ ಸಾಕಾಗಿದೆ ಎಂದು ನಾನು ಅಭಿಪ್ರಾಯ ಪಡುತ್ತೇವೆ.

ಶ್ರೀಮತಿ ಸುಮಾ ವಸಂತ.—ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ೧೭-೧೨-೮೫ರಲ್ಲಿ ಪೋಲೀಸರು ಗುಂಡು ಹಾರಿಸಿದ್ದಾರೆಂಬುದನ್ನು ಖಚಿತವಾಗಿ ತಿಳಿಸಿಲ್ಲ. ೨೨ರವರೆಗೂ ಅವರು ಒಪ್ಪಿಕೊಳ್ಳಲಿಲ್ಲ. ಆದರ ಗಂಡಸನ್ನು ತಂದು ಕೊಟ್ಟಾಗ ಹಾಗೂ ಸ್ಥಳೀಯ ಪತ್ರಿಕೆಯಲ್ಲಿ ಆ ವಿಚಾರ ಬಂದ ನಂತರ ಗುಂಡು ಹಾರಿಸಿದ್ದೇವೆಂದು ಒಪ್ಪಿಕೊಂಡಿದ್ದಾರೆ. ೨೮-೧-೮೬ರಲ್ಲಿ ಆಲ್ಲಿಯ ಲೋಕಲ್ ಪೇಪರ್‌ನಲ್ಲಿ ಡೆಡ್ ಬಾಡಿಯಲ್ಲಿದ್ದಂತಹ ೬ ಗುಂಡುಗಳನ್ನು ತೆಗೆದುಕೊಂಡು ಡಿ.ಸಿ.ಯವರ ಕೈಯಲ್ಲಿ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ಬಂದ ನಂತರ ಇವೊತ್ತು ಇವರ ಹೇಳಿಕೆಯಲ್ಲಿ ಗಾಳಿಗೆ ಗುಂಡು ಹಾರಿಸಿದ್ದೇವೆಂದು ಒಪ್ಪಿಕೊಳ್ಳುತ್ತಿದ್ದಾರೆ. ಸಿಲಿಂಡರ್ ಸಿಡಿದದ್ದು ಹೇಗೆ ಆಯಿತು ? ಸಿಲಿಂಡರ್ ಸಿಡಿದರೆ ಆ ಮನೆಯ ವಾತಾವರಣ ಹೇಗೆ ಇರುತ್ತಿತ್ತು ? ಎಂಬುದನ್ನು ನಾನು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಆ ಪಾನೆ ಹೆಂಚಿನ ಮನೆ.ಮಹಡಿ ಮನೆ ಕೂಡ ಇದೆ.ರಸ್ತೆ ಎತ್ತರದಲ್ಲಿದೆ. ಮನೆ ತಗ್ಗಿನಲ್ಲಿದೆ. ಮನೆಯ ಒಳಗಡೆ ನಿಂತುಕೊಂಡು ಕಿಟಕಿಯಲ್ಲಿ ನಿಂತುಕೊಂಡು ರಸ್ತೆಯಲ್ಲಿ ಬಂದಿದ್ದಂತಹವರ ಮೇಲೆ ಗುಂಡನ್ನು ಹೊಡೆದರು. ಆ ಕಡೆ ಬೇಲಿಯನ್ನು ಕಟ್ಟಿದಂತಹವರ ಮೇಲೆ ಮೊದಲೇ ಗುಂಡನ್ನು ಹೊಡೆದು ತೀರಿಸಿದ್ದರು. ಪೋಲೀಸ್‌ನವರು ಬಂದ ಮೇಲೆ ೩ ಜನರ ಮೇಲೆ ಗುಂಡು ಹೊಡೆದಿದ್ದಾರೆ. ಮನೆಯಂ ಒಳಗಡೆಯಿಂದ ಗುಂಡು ಹಾರಿಸಿದ್ದಾರೆ. ಪೋಲೀಸರು ಹಾರಿಸಿದ್ದಂತಹ ಗುಂಡು ಮನೆಯೊಳಗೆ ಹೋಗಿರಬೇಕಾದರೆ ಗೋಡೆ ತೂತಾಗಿರಬೇಕು. ಇಲ್ಲವೇ ಗೋಡೆ ಬಿರುಕು ಬಿಟ್ಟಿರಬೇಕು. ಮೇಲಾಧಿಕಾರಿಗಳು ಸ್ಥಳಕ್ಕೆ ಹೋಗಿ ಪರೀಕ್ಷೆ ಮಾಡಿ ತಪ್ಪು ಎಂಬುದಾಗಿ ಹೇಳಿದ್ದಾರೆ. ಆಲ್ಲಿ ಪೋಲೀಸ್‌ನವರು ಗುಂಡು ಹಾರಿಸಲಿಲ್ಲವೆಂದು ನಾನು ಹೇಳಲಿಲ್ಲ. ಆಲ್ಲಿಯ ಎಸ್.ಪಿ.ಯವರು ಸ್ಥಳಕ್ಕೆ ಹೋಗಿ ಪರೀಕ್ಷೆ ಮಾಡಿ, ಗಾಯವಾಗಿದ್ದಂತಹ ಪೋಲೀಸ್ ಪೇದೆಗಳು ಹಾಗೂ ಸಬ್ ಇನ್ಸ್‌ಪೆಕ್ಟರ್‌ರವರು ಆಸ್ಪತ್ರೆಗೆ ಹೋಗುವ ಗಾಬರಿಯಲ್ಲಿ ಗುಂಡು ಹಾರಿಸಿದ್ದೇವೆಂದು ಹೇಳಿಲ್ಲವೆಂದು ತಿಳಿಸಿದ್ದಾರೆ. ಇದರಲ್ಲಿ ಡಿ.ವೈ.ಎಸ್.ಪಿ. ಹಾಗೂ ಪೋಲಿಸ್ ಸಬ್‌ಇನ್‌ಸ್ಪೆಕ್ಟರ್ ರವರ ಲೋಪ ಮಾಡಿದ್ದಾರೆಂದು ತಿಳಿದ ಮೇಲೆ ಆ ಇಬ್ಬರಲ್ಲಿ ಒಬ್ಬರನ್ನು ಆಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿದ್ದೇನೆ. ಇನ್ನೊಬ್ಬರು ಇನ್ನೂ ಆಲ್ಲೇ ಇದ್ದಾರೆ. ಇವತ್ತು ಅವರ ಮೇಲೆ ವಿಚಾರಣೆ ನಡೆಯುತ್ತಿದ್ದು, ವಿಚಾರಣೆಯಾದ ಮೇಲೆ ಏನು ಶಿಕ್ಷೆ ಕೊಡಬೇಕೋ ಆದನ್ನು ಅವರಿಗೆ ಕೊಡೋಣ ವೆಂದು ಆಲ್ಲೇ ಇಟ್ಟಿದ್ದೇನೆ. ನಾನೂ ಕೂಡ ಸ್ಥಳಕ್ಕೆ ಹೋಗಿ ಬಂದಿದ್ದೇನೆ. ಆಲ್ಲಿಗೆ ಹೋದಂತಹ ಸಮಯದಲ್ಲಿ ಅಲ್ಲಿ ಸಾವಿರಾರು ಜನ ಸೇರಿದ್ದರು, ಹೇಗೆ ನಡೆಯಿತು ಎಂಬುದು ಸ್ಥಳಕ್ಕೆ ಹೋಗಿ ನೋಡಿದವರಿಗೆ ಅರ್ಥವಾಗುತ್ತದೆ. ಪೋಲೀಸರು ಗುಂಡು ಹಾರಿಸಿದ್ದೇವೆಂದು ಅವರು ಹೇಳದೇ ಇರುವಂತಹದ್ದು ತಪ್ಪು ಆಗಿದೆ. ಎಲ್ಲರ ಮೇಲೆ ಗುಂಡನ್ನು ಆ ವ್ಯಕ್ತಿ ಹಾರಿಸಿದ್ದಾರೆ. ಪೋಲೀಸ್‌ನವರ ಮೇಲೂ ಗುಂಡು ಹಾರಿಸಿದ್ದಾರೆ ಪೋಲೀಸ್‌ನವರು ತಮ್ಮ ರಕ್ಷಣೆಗಾಗಿ ಗುಂಡು ಹಾರಿಸಿದ್ದಾರೆ. ನಂತರ ಹೇಗೂ ಸಿಕ್ಕಿಬೀಳುತ್ತೇವೆಂದು ತಿಳಿದು ಮನೆಯಲ್ಲಿದ್ದಂತಹ ತಂದೆ ತಾಯಿಗಳನ್ನು ಆಚೆಗೆ ಕಳುಹಿಸಿ, ಮನೆಯಲ್ಲಿದ್ದಂತಹ ಸಿಲಿಂಡರ್ ಬಸ್ಟ್ ಸಿಡಿಸಿ ಸತ್ತಿದ್ದಾರೆಂದು ಆಲ್ಲಿಯ ಜನಗಳೇ

ನಾನು ಅಲ್ಲಿಗೆ ಹೋಗಿದ್ದಾಗ ಹೇಳಿದರು. ಇದರ ಬಗ್ಗೆ ಸಿ.ಓ ಡಿ.ಯಿಂದ ತನಿಖೆಯಾಗುತ್ತದೆ. ಜೊತೆಗೆ ಸಬ್‌ಡಿವಿಜನಲ್ ಮಾಜಿಸ್ಟ್ರೇಟರಿಂದ ಕೂಡ ತನಿಖೆ ನಡೆಸುತ್ತಿದ್ದೇವೆ ಆದ್ದರಿಂದ ಇವರಿಬ್ಬರೂ ತನಿಖೆಯಾಗಿ ವರದಿ ಬಂದ ಮೇಲೆ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವಂಥಹದ್ದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬಂದಿದ್ದೇನೆಂದು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಹೇಳಿಕೆಯನ್ನು ನಾನು ಕೂಲಂಕುಷವಾಗಿ ಓದಿದ್ದೇನೆ. ಇದು ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಪೋಲೀಸ್‌ನವರನ್ನು ರಕ್ಷಣೆ ಮಾಡತಕ್ಕಂತಹ ಪ್ರಯತ್ನವನ್ನು ನಮ್ಮ ಗೃಹ ಸಚಿವರು ಮಾಡಬಾರದಾಗಿತ್ತು. ಅವರು ತಮ್ಮದೇ ಆದ ಹೇಳಿಕೆಯನ್ನು ಕೊಡಬೇಕಾಗಿತ್ತು. ಪೋಲೀಸ್‌ನವರು ಕೊಟ್ಟಂತಹ ಹೇಳಿಕೆಯನ್ನು ಅವರು ಇಲ್ಲಿ ಓದಬಾರದಿತ್ತು. ತಾವೇ ಕೊಟ್ಟಂತಹ ಹೇಳಿಕೆಯಲ್ಲಿ ಕೆಲವು ಪ್ರಶ್ನೆಗಳು ಉದ್ಭವವಾಗುತ್ತವೆ. ತಾವೂ ಒಪ್ಪಿದ್ದೀರಿ. ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಇರಬಹುದು, ಅಥವಾ ಸರ್ಕಲ್ ಇನ್ಸ್‌ಪೆಕ್ಟರ್ ಇರಬಹುದು, ಇವರ ಲೋಪದಿಂದ ಆದಂತಹ ಅನಾಹುತ, ಇದು ಅಮಾನುಷ.

> "೧೧ ಗಂಟೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಎರಡು ಪಕ್ಷದವರಿಗೂ ಸಮಾಧಾನ ಹೇಳಿ ಶಾಂತಿಯಿಂದ ಇರುವಂತೆ ಸೂಚಿಸಿ ವಾಪಸ್ ಹೋದರು."

ಎಂಬುದಾಗಿ ನಿಮ್ಮ ಹೇಳಿಕೆಯಲ್ಲೇ ಹೇಳಿದ್ದೀರಿ. ಆಗ ಟೆನ್ಸನ್ ಇತ್ತು. ಆಲ್ಲಿ ಒಬ್ಬ ಪಿ.ಸಿ.ಯನ್ನು ಬಿಟ್ಟು ಹೋಗಿದ್ದರೂ ಅವರ ಪ್ರಾಣ ಉಳಿಯುತ್ತಿತ್ತು. ಎದುರು ಪಕ್ಷದವರು ಬೇಲಿ ಹಾಕುವುದು, ಇವರು ತಡೆಯುವುದು ಇದು ಸತತವಾಗಿ ನಡೆಯುತ್ತಿತ್ತು. ಅದನ್ನು ತಾವು ವಿವರಿಸಬೇಕು. ಮತ್ತೆ ಖಾಸಗಿ ಜೀಪಿನಲ್ಲಿ ಸ್ಥಳಕ್ಕೆ ಹೋದರು ಎಂಬುದಾಗಿ ಹೇಳಿದ್ದೀರಿ. ಯಾರ ಜೀಪಿನಲ್ಲಿ ಬಂದರು ? ಅದನ್ನು ತಾವು ಹೇಳಿ. ಆಮೇಲೆ ವಿರಾಜಪೇಟೆಗೂ ಕುಟ್ಟಾಕ್ಕೂ ಬಹಳಷ್ಟು ದೂರ ಏನೂ ಇಲ್ಲ. They could have taken that Circle Inspector's jeep, They could have taken Dy. SP's Jeep. Why should they take the private man's jeep ? Who is the owner of that jeep ? ಆ ಜೀಪನ್ನು ಯಾರು ಕೊಟ್ಟರು? ಅದನ್ನು ಹೇಳಬೇಕು. ನಂತರ ೫ ಗಂಟೆ ಸಮಯದಲ್ಲಿ ಸುದ್ದಿ ತಿಳಿಯಿತು ಎಂಬುದಾಗಿ ಹೇಳಿದ್ದೀರಿ. ನಮಗೂ ಕೆಲವು ಮಾಹಿತಿಗಳು ಬಂದಿವೆ. ೪೦ ಜನ ಗೂಂಡಾಗಳನ್ನು ತೆಗೆದುಕೊಂಡು ಆ ಸಬ್ ಇನ್ಸ್‌ಪೆಕ್ಟರ್ ಖಾಸಗಿ ಜೀಪ್‌ನಲ್ಲಿ ಬಂದರೆ how to recognise that they are police ?

ಶ್ರೀ ಬಿ. ರಾಚಯ್ಯ.—ಹೇಳುವಾಗ ದಯವಮಾಡಿ ತಾವೇ ಸ್ಥಳಕ್ಕೆ ಹೋಗಿ ವಿಚಾರ ಮಾಡಿ ಬಂದು ಹೇಳಿ. ಮಾನ್ಯ ವೀರಪ್ಪ ಮೊಯಿಲಿಯವರ ವಿಚಾರದಲ್ಲಿ ನನಗೆ ಗೌರವ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ವಿಚಾರ ಮಾಡಿಕೊಂಡು ಬಂದಿದ್ದೀರಿ. ಅದನ್ನು ಪರಿಶೀಲನೆ ಮಾಡಿ ಎಂದು ಹೇಳುತ್ತಿದ್ದೇನೆ. It is for your police to investigate these things.

ಅಧ್ಯಕ್ಷರು. - ತಾವು ಬೇಕಾದರೆ ಹೋಗಿ ನೋಡಿಕೊಂಡು ಬಂದು ಮಾಹಿತಿ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಶ್ನೆ ಚಿಪ್ಪಯಾನೆ ಕೃಷ್ಣಕುಮಾರ್ ಅವರದ್ದಿರುವಾಗ Why should this Sub Inspector go along with him ? ಈ ಪ್ರಶ್ನೆ ಉದ್ಭವವಾಗುತ್ತದೆ. ಆರೆಸ್ಟ್ ಮಾಡಿದ್ದೇವೆ, ಬಿಟ್ಟಿದ್ದೇವೆ ಎಂಬ ಬಗ್ಗೆ ತಾವು ಏನೂ ಹೇಳಲಿಕ್ಕೆ ಹೋಗಲಿಲ್ಲ. ಸಬ್ ಇನ್ಸ್‌ಪೆಕ್ಟರ್ ಫೈರಿಂಗ್ ಮಾಡುವುದಕ್ಕೆ ತಯಾರು ಮಾಡಿಕೊಂಡು ಹೋಗಿದ್ದಾರೆಂಬುದು ನಿಮ್ಮ ಹೇಳಿಕೆ ಪ್ರಕಾರ ಗೊತ್ತಾಗುತ್ತದೆ. ೧೭ರಂದು ಘಟನೆ ನಡೆಯಿತು, ಆದರೆ ೨೭ರವರೆಗೆ ಸ್ಟೇಷನ್ ಡೈರಿಯಲ್ಲಿ, ಪೋಲೀಸ್ ಡೈರಿಯಲ್ಲಿ ಫೈರಿಂಗ್ ಮಾಡಿದ ಬಗ್ಗೆ ಎಂಟ್ರಿ ಇಲ್ಲ. ಗೊಂದಲದಲ್ಲಿ ಬಿಟ್ಟಿದ್ದಾರೆಂದು ಹೇಳುತ್ತೀರಿ. ೧೯-೧೨-೮೫ರಂದು ಡ್ಯೂಟಿಗೆ ರಿಪೋರ್ಟ್ ಮಾಡಿಕೊಂಡ ಅಧಿಕಾರಿಯನ್ನು ವರ್ಗ ಮಾಡಿದ್ದೀರಿ. Because of his negligence, because of his omission, because of this positive action by taking some of these people, because of the firing...

ಅಲ್ಲಿ ಅನ್-ನ್ಯಾಚುರಲ್ ಡತ್ ಆಗಿದೆ. ಆಂದಾಗ ಅವರನ್ನು ವರ್ಗಮಾಡಿ ಏನು ನ್ಯಾಯ ಕೊಡುತ್ತೀರಿ ? You are bound to keep him under supension under the circumstances which are available. ಈ ವಿಚಾರದಲ್ಲಿ ಸರ್ಕಾರ ಪ್ರೊಟೆಕ್ಟ್ ಮಾಡಲಿಕ್ಕೆ ಹೋಗಬಾರದು. I am confident you are interested in impartial enquiry by keeping that Sub Inspector under suspension. ಅದಕ್ಕೆ ವೀನಾವೇಷ ಏನೆಸುವುದು ಏತಕ್ಕೆ Dy.S.P. came to the spot at 8,00P.M and the Circle Inspector came at 9.00 P.M. ಇದು ಏತಕ್ಕೆಆಯಿತು ? ಇದನ್ನು ತಾವು ದಯವಾಡಿ ಹೇಳಬೇಕು. Dy. S.P. was transferred from the place within 4 days. He inspected the spot at the first point of time apart from the Sub Inspector. He issued a charge memo to the Sub-Inspector having been convinced that he has fired against those people ಇದು ಆನುಮಾನಕ್ಕೆ ಆಸ್ಪದವಾಗುತ್ತದೆ. ಇದು ಫೈರಿಂಗ್ ಇನ್‌ವೆಸ್ಟಿಗೇಷನ್. ಇದರ ಬಗ್ಗೆ ಹೆಚ್ಚು ವಿಶ್ಲೇಷಿಸಿ ಹೇಳುವುದಕ್ಕೆ ಸಾಧ್ಯವಿಲ್ಲ ಅಲ್ಲಿನ ಪರಿಸ್ಥಿತಿಯನ್ನು ವಿಚಾರ ಮಾಡಬೇಕು. ಡಿವೈಎಸ್‌ಪಿಯವರೇ ಮೊದಲು ಆ ಸ್ಥಳಕ್ಕೆ ಹೋದವರು. ಅವರದ್ದೇನಾದರೂ ತಪ್ಪಿದ್ದರೆ ಸಸ್ಪೆಂಡ್ ಮಾಡಬಹುದಾಗಿತ್ತು. ಯಾವುದೇ ವಿಚಾರಣೆ ಮಾಡದೆ ಅವರನ್ನು ವರ್ಗ ಮಾಡಿದ್ದೀರಿ. ಅಲ್ಲಿ ಗರ್ಭಿಣಿ ಸ್ತ್ರೀ ಒಬ್ಬರು ಮೃತ ಪಟ್ಟಿದ್ದಾರೆ. ಆಂದಾಗ ಇರ ಜೊತೆಗೆ ಒಂದು ಸೇರಿ ಳ ಜೀವ ಹೋದ ಹಾಗೆ ಆಯಿತು. ಅವರ ಪೋಸ್ಟ್ ಮಾರ್ಟಂ ರಿಪೋರ್ಟನ್ನು ದಯವಾಡಿ ಪ್ರೊಡ್ಯೂಸ್ ಮಾಡಬೇಕು,

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯಲ್ಲಿ ನೀವು ಇಷ್ಟೊಂದು ವಿವರಣೆ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ರಾಚಯ್ಯ.—ಸ್ಥಳಕ್ಕೆ ಹೋಗಿ ಜನರನ್ನು ವಿಚಾರಿಸಿಕೊಂಡು ಬಂದು ಹೇಳಿದರೆ ಅವರ ಪಾತಿನಲ್ಲಿ ವಿಶ್ವಾಸ ಮೂಡುತ್ತದೆ. ನನಗೂ ಮೊದಲು ಅವರ ಹಾಗೆಯೇ ಅನ್ನಿಸುತ್ತಿತ್ತು.

ಶ್ರೀ ಎಂ, ವೀರಪ್ಪ ಮೊಯಿಲಿ.—ನಾನೂ ಕೂಡ ನಿನ್ನೆ ಮಡಿಕೇರಿಗೆ ಹೋಗಿ ವಿಚಾರಿಸಿದ್ದೇನೆ. ನಾನು ಫೈರಿಂಗ್ ನಡೆದ ಸ್ಥಳಕ್ಕೆ ಹೋಗದಿದ್ದರೂ ಅಲ್ಲಿನ ಜನರ ಮಾತುಗಳಿಂದ ಮನವರಿಕೆಯಾಗಿ ಹೇಳುತ್ತಿದ್ದೇನೆ. ಅಲ್ಲಿ ಅಡಿಗೆ ಮನೆ ಇರುವುದು ಕೆಳಗಡೆ, ಸಿಲಿಂಡರ್ ಬರ್ಸ್ಟ್ ಆದದ್ದು ಪ್ರಮಹಡಿಯಲ್ಲಿ. ಸಿಲಿಂಡರ್ ಬರ್ಸ್ಟ್ ಆದರೆ ಗೋಡೆ ಒಡೆಯಬೇಕಾಗಿತ್ತು. ಆದರೆ ಮಹಡಿ ಪಾತ್ರ ಬಿದ್ದಿದೆ. ಫೈರಿಂಗ್ ಆದಕೂಡಲೇ ಸಾವಿರಾರು ಜನ ಬಂದು ಸೇರಿದ್ದಾರೆ. ಅಲ್ಲಿ ಯಾವುದೇ ಸೌಂಡ್ ಇಲ್ಲ, ಸ್ಪ್ಲಾಗಲ್ ಇಲ್ಲ. ೩ ಸತ್ತ ಹೆಣಗಳ ದೇಹ ಸಾಲಾಗಿ ಬಿದ್ದಿದೆ. ಫೈರಿಂಗ್ ನಡೆದಿರುವುದರಿಂದ ಅವರು ಆ ರೀತಿ ಸದ್ದಿಲ್ಲದೆ ಬಿದ್ದಿದ್ದಾರೆ. ಅದು ಸಿಲಿಂಡರ್ ಸಿಡಿತದಿಂದ ಆಗಿರುವುದು ಅಲ್ಲ. ಸಿಲಿಂಡರ್ ಅಷ್ಟು ಸುಲಭವಾಗಿ ಒಡೆಯುವುದಿಲ್ಲ. ಸಿಲಿಂಡರ್ ಒಡೆಯುವುದಕ್ಕೆ ೩ ಗಂಟೆಯಾದರೂ ಬೇಕಾಗುತ್ತದೆ. ಈ ಬಗ್ಗೆ ಬೇಕಾದರೆ ನೀವು ಎಕ್ಸ್‌ಪರ್ಟ್ಸ್ ಅನ್ನು ಕನ್‌ಸಲ್ಟ್ ಮಾಡಿ ನೋಡಿ. ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದರೂ ಕೂಡ ಅದು ಸಿಲಿಂಡರ್ ಸಿಡಿತದಿಂದ ಆಗಿದೆ ಅನ್ನಿಸುವುದಿಲ್ಲ. ಅಲ್ಲಿಗೆ ಪೋಲೀಸರು ಬಂದು ಫೈರಿಂಗ್ ಮಾಡಿದ ಮೇಲೆ ಅವರ ಸಮ್ಮುಖದಲ್ಲೇ ಆವರು ಅಸುನೀಗಿದ್ದಾರೆ. ಪೋಲೀಸ್ ಅಧಿಕಾರಿಗಳು ಮಾಡಿದ ತಪ್ಪನ್ನು ನಾವು ಎಲ್ಲಿಯವರೆಗೆ ಸಹಿಸಿಕೊಂಡಿರಲು ಸಾಧ್ಯ.

ಅಧ್ಯಕ್ಷರು.—ಕ್ಲಾರಿಫಿಕೇಷನ್ನಿಗೆ ಎಷ್ಟು ಸಮಯ ತೆಗೆದುಕೊಳ್ಳುವುದು ? ಮಂತ್ರಿ ಏನಾದರೂ ಇದ್ದರೆ ಬರೆದು ಕಳುಹಿಸಿ ಅಥವಾ ಅವರ ಪಕ್ಕದಲ್ಲಿ ಕುಳಿತು ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ದಯವಿಟ್ಟು ತಾವು ಈ ಫೋಟೋವನ್ನು ನೋಡಿ. ಇದನ್ನು ತಮ್ಮ ಕಡೆ ಕಳುಹಿಸಿ ಕೊಡುತ್ತೇನೆ. ಎಷ್ಟು ಗಂಭೀರವಾಗಿ ಸತ್ತು ಬಿದ್ದಿದ್ದಾರೆಂಬುದನ್ನು ಆ ಫೋಟೋದಲ್ಲಿ ತಾವು ಕಾಣಬಹುದು. ಅದೂ ಕೂಡ ನಡೆದಿರುವುದು ಪೋಲೀಸರ ಸಮಕ್ಷಮದಲ್ಲಿ. ಆತ್ಮಹತ್ಯೆ ಎಂದು ಇತರರು ಕಥೆ ಕಟ್ಟಿದ್ದಾರೆ. ಹೆಣಕ್ಕೆ ಸ್ನಾನ ಮಾಡಿಸುವಾಗ ಗುಂಡುಗಳು ಹೊಕ್ಕಿರುವುದು ಕಂಡುಬಂದಿದೆ. ಮೃತರ ತಂದೆ ಕೂಡ ಸ್ನಾನ ಮಾಡಿಸುವಾಗ ಗುಂಡುಗಳು ಸಿಕ್ಕಿವೆ ಎಂದು ಅಫಿಡವಿಟ್‌ನಲ್ಲಿ ಹೇಳಿದ್ದಾರೆ. ಆ ಅಫಿಡವಿಟ್‌ನ ಪ್ರತಿಯನ್ನೂ ಸಹ ತಮ್ಮ ಕಡೆ ಕಳುಹಿಸಿಕೊಡುತ್ತೇನೆ.

ತ್ತೇನೆ. ಸರ್ಕಾರ ೧೭ರಿಂದ ೨೭ರವರೆಗೆ ಸುಮ್ಮನಿರುವುದನ್ನು ನೋಡಿದರೆ ಸರ್ಕಾರದ ಕಾರ್ಯಕ್ರಮದಲ್ಲಿ ಜನರಿಗೆ ಖಂಡಿತ ವಿಶ್ವಾಸ ಹುಟ್ಟುವುದಿಲ್ಲ. ಇದರ ಬಗ್ಗೆ ತಾವು ಉತ್ತರಿಸಬೇಕು. I think ghastly incident like that apart from investigation you will have to institute judicial enquiry over this matter.

ಶ್ರೀ ಬಿ. ರಾಚಯ್ಯ —ಮಾನ್ಯ ಮೊಯಿಲಿಯಂಪರರು ಕೆಲವು ವಿವರಗಳನ್ನು ಕೇಳಿದ್ದಾರೆ. ಪೋಲೀಸರು ಗುಂಡೇಟು ಹೊಡೆದುದ್ದರಿಂದ ಸತ್ತಿದ್ದಾರೆಂದು ಹೇಳಿದ್ದಾರೆ. ಸತ್ತವರ ಮೈ ಮೇಲೆ ಗುಂಡುಗಳು ಇದ್ದವು ಎಂದು ಕೂಡ ಹೇಳಿದ್ದಾರೆ. ಬಹುಶಃ ಪೋಸ್ಟ್ ಮಾರ್ಟಂ ರಿಪೋರ್ಟಿನಲ್ಲಿ ಏನಿದೆ ಎಂಬುದು ಆಮೇಲೆ ಗೊತ್ತಾಗುತ್ತದೆ, ಈವತ್ತು ನಾನು ಇಲಾಖಾ ತನಿಖೆ ಮಾಡಿರುವ ಉದ್ದೇಶ ಇಷ್ಟೆ. ಆ ಕಡೆ ಗುಂಡು ಹೊಡೆಯಿರಿ ಎಂದು ಹೇಳಿದಾಗ ಮನೆಗೆ ಗುಂಡು ಹೊಡೆದರೂ ಮನೆಯೊಳಗೆ ಹೊಡೆಯುವುದಕ್ಕೆ ಸಾಧ್ಯವಿಲ್ಲ. ಅವರು ಮೆರವಣಿಗೆ ಮನೆಯಲ್ಲಿದ್ದಾರೆ. ಆ ಕಡೆ ಈ ಕಡೆ ಗುಂಡು ಹಾರಿಸುತ್ತಿದ್ದಾರೆ. ಜನ ಹೆದರಿಕೊಂಡು ಆ ಕಡೆ ಹೋಗದೆ ಒಂದು ಫರ್ಲಾಂಗ್ ದೂರದಲ್ಲಿದ್ದಾರೆ. ಎರಡು ದಿನಗಳವರೆಗೆ ಜನರು ಯಾರೂ ಆ ಕಡೆ ಹೋಗಿಲ್ಲ ಎಂಬುದು ಒಂದು ಸಂದಿಗ್ಧ ಯಾದರೆ ಪೋಲೀಸರಿಗೆ ಜನರು ಗುಂಡು ಹಾರಿಸಿದ್ದಾರೆಂದು ಪುತ್ತೊಂದು ವರ್ತಮಾನ ಬಂದಿದೆ. ಈ ಹೇಳಿಕೆಯನ್ನು ತೆಗೆದುಕೊಂಡ ಮೇಲೆ ಏಟು ತಿಂದು ಒಂದ ಪೋಲೀಸರನ್ನು ಸಸ್ಪೆಂಡ್ ಮಾಡುವುದು ನ್ಯಾಯವಾಗಿ ಕಾಣುವುದಿಲ್ಲವೆಂದು ಸಸ್ಪೆಂಡ್ ಮಾಡಿಲ್ಲ. ಆದಕ್ಕೋಸ್ಕರ ಸಿಓಡಿ ಮತ್ತು ಡಿವೈಎಸ್‌ಪಿ ಅವರ ವರದಿ ಬರಲಿ ಎಂದು ಕಾಯುತ್ತಿದ್ದೇವೆ, ಮತ್ತು ಅವರ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಪ್ರಾಮಾಣಿಕವಾಗಿ ಹೇಳುವುದಾದರೆ ಯಾರಿಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸುವುದಕ್ಕೆ ನಾವಿದ್ದೇವೆಯೇ ಹೊರತು ಅನ್ಯಾಯ ಮಾಡುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು. —ಮುಂದಿನ ವರದಿ ಬರಲಿ ಎಂದು ಹೇಳುತ್ತಾರೆ. ಈಗ ಮುಂದಿನ ವಿಷಯಕ್ಕೆ ಹೋಗೋಣ.

ನಿಯಮ 334ರ ಮೇರೆಗೆ

೩-೩೦ ಪಿ. ಎಂ.

ಶ್ರೀ ಎಂ. ಎಸ್. ಪಾಟೀಲ್
ಲೀಲಾದೇವಿ ಆರ್. ಪ್ರಸಾದ್ — ಸದಸ್ಯರು ಗೈರುಹಾಜರಿ.
ಕೆ. ವಸಂತ ಬಂಗೇರ

(i) ಉಳ್ಳಾಲ ಸಮುದ್ರ ತೀರವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಮಂಗಳೂರು ತಾಲ್ಲೂಕಿನ ಉಳ್ಳಾಲ ಸಮುದ್ರ ಕಿನಾರೆಯಲ್ಲಿದೆ. ಇದು ಪ್ರಕೃತಿ ಸೌಂದರ್ಯದ ತಾಣವಾಗಿದೆ. ಬಹು ಸಂಖ್ಯೆಯ ವಿಮಾನುಗಾರರು ವಿಮಾನ ಹಿಡಿಯುವ ಮತ್ತು ಮಾರುವ ಆಕರ್ಷಣೀಯ ನೆಲೆಯಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಅತ್ಯಂತ ಧೈರ್ಯದಿಂದ ಪೋರ್ಚುಗೀಸರ ವಿರುದ್ಧ ಹೋರಾಡಿದ ವೀರ ಮಹಿಳೆ ಅಬ್ಬಕ್ಕರಾಣಿ ವಾಸವಾಗಿದ್ದ ಸ್ಥಳ ಇದಾಗಿದೆ. ಅಲ್ಲದೆ ಭಾರತದ ಅತ್ಯಂತ ಪ್ರಖ್ಯಾತವಾದ ಐದು ದರ್ಗಾಗಳಲ್ಲಿ ಒಂದಾದ ಸೈಯ್ಯದ್ ಶರೀಫುಲ್ ಮದನಿದರ್ಗಾ ಉಳ್ಳಾಲದಲ್ಲಿದೆ. ಸಾವಿರಾರು ಯಾತ್ರಿಕರು ಇಲ್ಲಿಗೆ ದಿನನಿತ್ಯ ಬರುತ್ತಿದ್ದಾರೆ. ಆದರೆ ಇಲ್ಲೊಂದು ಪ್ರವಾಸೋದ್ಯಮ ತಾಣ ಇರುವುದಿಲ್ಲ. ಹಿಂದೊಮ್ಮೆ ಇಲ್ಲಿ ಪ್ರವಾಸೋದ್ಯಮ ತಾಣ ಇರುವುದಿಲ್ಲವೆಂದು ಯೋಚಿಸಿ ಮಾತುಕತೆಯಾಡಿ ಸರಕಾರಕ್ಕೂ ತಿಳಿಸಲಾಗಿತ್ತು ಆದರೆ ಅದು ಇನ್ನು ಯಾವುದೇ ರೂಪುತಾಳಿಲ್ಲ. ಆದ ಕಾರಣ ಇಂತಹ ಸುಂದರವಾದ ಕಡಲ ತಡಿಯಾದ ಉಳ್ಳಾಲದಲ್ಲಿ ಒಂದು ಪ್ರವಾಸೋದ್ಯಮ ನೆಲೆಯನ್ನು ಸ್ಥಾಪಿಸಿ ಬರತಕ್ಕ ಪ್ರಯಾಣಿಕರಿಗೆ ಅನುಕೂಲ ಒದಗಿಸಿಕೊಡುವಂಥಾದ್ದು ಅತ್ಯಂತ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ಪ್ರವಾಸೋದ್ಯಮ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೀವರಾಜ ಆಳ್ವ.—ಉಳ್ಳಾಲದಲ್ಲಿ ಬರುವ ವರ್ಷ ಪ್ರವಾಸೋದ್ಯಮದ ಕೇಂದ್ರವನ್ನು ಆರಂಭ ಮಾಡುತ್ತೇನೆ.

(ಉಪಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)